ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ

ಕನ್ನಡ ಅಧ್ಯಯನ ವಿಭಾಗ

ಪಿಎಚ್.ಡಿ ಅಧ್ಯಯನಕ್ಕಾಗಿ ಸಲ್ಲಿಸುತ್ತಿರುವ ಪೂರ್ವಭಾವಿ ಸಾರಲೇಖ

ವಿಷಯ: "ಕಲಬುರಗಿ ಜಿಲ್ಲೆಯ ಆಧುನಿಕ ವಚನಸಾಹಿತ್ಯ: ಒಂದು ಅಧ್ಯಯನ"

ಸಂಶೋಧನ ವಿದ್ಯಾರ್ಥಿನಿ

ಕು.ಸುಕನ್ಯಾ ಮಾಣಿಕರಾವ

ಮಾರ್ಗದರ್ಶಕರು

ಡಾ.ಎಂ.ನಾಗರಾಜ

ಎಂ.ಎ ಎಂ.ಫಿಲ್ ಪಿಎಚ್.ಡಿ

ಸಹಾಯಕ ಪ್ರಾಧ್ಯಾಪಕರು

ಕನ್ನಡ ಅಧ್ಯಯನ ವಿಭಾಗ

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ

೨೦೧೬-೧೭

ಪರಿವಿಡಿ

ಅಧ್ಯಾಯ: ೧ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ: ೨ ವಚನ ಸಾಹಿತ್ಯದ ಪರಂಪರೆ

ಅ. ಪ್ರಾಚೀನ

ಬ. ಆಧುನಿಕ

ಅಧ್ಯಾಯ: ೩ ಆಧುನಿಕ ವಚನಕಾರರ ಆಶಯ ಹಾಗೂ ಧೋರಣೆ

ಅಧ್ಯಾಯ: ೪ ಕಲಬುರಗಿ ಜಿಲ್ಲೆಯ ಪ್ರಾಚೀನ ವಚನಕಾರರು, ಆಧುನಿಕ ವಚನಕಾರರು

ಅಧ್ಯಾಯ: ೫. ಕಲಬುರಗಿ ಜಿಲ್ಲೆಯ ಆಧುನಿಕ ವಚನಗಳ ವಿವೇಚನೆ

ಅ. ವಸ್ತು

ಇ. ತಂತ್ರ

ಈ. ಸಾಹಿತಿಕ ಮೌಲ್ಯ

ಉ. ಛಂದಸ್ಸು

ಊ. ಭಾಷೆ

ಋ. ಸಾಂಸ್ಕೃತಿಕ ಮೌಲ್ಯ

ಅಧ್ಯಾಯ: ೬ ವಚನ ಸಾಹಿತ್ಯಕ್ಕೆ ಕಲಬುರಗಿ ಜಿಲ್ಲೆಯ ಕೊಡುಗೆ

ಅಧ್ಯಾಯ: ೭ ಸಮಾರೋಪ

ಅನುಬಂಧ

ಆಕರ ಗ್ರಂಥಗಳು

೧. ಆಧುನಿಕ ವಚನಕಾರರ ಪಟ್ಟಿ

೨. ಕಲಬುರಗಿ ಜಿಲ್ಲೆಯ ಆಧುನಿಕ ವಚನಕಾರರ ಪಟ್ಟಿ

ಪೀಠಿಕೆ

ಹೊಸಗನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯವು ಅತ್ಯಂತ ವಿಸ್ತಾರವಾಗಿ ಬೆಳೆದು ಬಂದಿದೆ. ಅಷ್ಟೇ ಅಲ್ಲದೇ ಕನ್ನಡ ನೆಲದಲ್ಲಿ ಬಿತ್ತಿದ ಬೀಜವು ಬಸವಾದಿ ಶರಣದಿಂದ ಆರಂಭಗೊಂಡು ಇದೊಂದು ಸಾಹಿತ್ಯ ಸತ್ಯ ಪ್ರಕಾರವಾಗಿ ಸುದೀರ್ಘ ಪರಂಪರೆಯನ್ನು ನಿರ್ಮಿಸುವ ಶಕ್ತಿಯಾಗಿ ಬೆಳೆದು ಬಂದಿರುವುದನ್ನು ಕಾಣಬಹುದು. ಆದ್ಯವಚನಕಾರ ಜೇಡರ ದಾಸಿಮಯ್ಯನಿಂದ ಪ್ರಾರಂಭ ವಾದ ವಚನ ಸಾಹಿತ್ಯವು ಇಂದಿನ ಯುಗದವರೆಗೂ ಹೆಮ್ಮರವಾಗಿ ಬೆಳೆಯುತ್ತಾ ಬಂದಿರುವುದು ಕಂಡು ಬರುತ್ತದೆ. ಹೀಗಾಗಿ ೧೨ನೇ ಶತಮಾನದ ವಚನ ಸಾಹಿತ್ಯ ರಸಗಂಗೆಯಾಗಿ ವಿಶ್ವವನ್ನೆ ಪಾವನಗೊಳಿಸಿದ ಅಮೂಲ್ಯ ವಾಹಿನಿಯಾಗಿದೆ. ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಚಳುವಳಿಯು ಹಾಗೂ ವರ್ಗ, ವರ್ಣ, ಜಾತಿ ಮತ, ಪಂಥ ಲಿಂಗಭೇದಗಳನ್ನು ಸಕಲ ಸಮುದಾಯದ ಜನರನೆಲ್ಲ ಏಕಛತ್ರದಡಿಗೆ ತಂದು ನಿಲ್ಲಿಸಿದ ಸುವರ್ಣಕಾಲ ಇದಾಗಿದೆ. ಅಷ್ಟೇ ಅಲ್ಲದೇ ಇದು ಸುದೀರ್ಘವಾದ ಇತಿಹಾಸವುಳ್ಳ ಕನ್ನಡ ಭಾಷೆ ಸಾಹಿತ್ಯಕ್ಕೆ ಹೆಚ್ಚಿನ ಮೆರಗನ್ನು ದೊರಕಿಸಿಕೊಟ್ಟಿದೆ.

ಕನ್ನಡ ಭಾಷೆಯು ಪ್ರಾಚೀನ ಕಾಲದಿಂದ ಹಿಡಿದು ಇಂದಿನ ೨೧ ನೇ ಶತಮಾನದವರೆಗೆ ಉಜ್ವಲವಾದ ಪ್ರಕಾಶವನ್ನು ಸಾಹಿತ್ಯದ ವಿವಿಧ ಪ್ರಕಾರಗಳ ಮೇಲೆ ತನ್ನ ಬೆಳಕನ್ನು ಚೆಲ್ಲುತ್ತಾ ಬಂದಿದೆ. ಕಾವ್ಯ, ಕಥೆ, ಕಾದಂಬರಿ, ನಾಟಕ, ವಚನ, ವಿಮರ್ಶೆ, ಪ್ರಬಂಧ ಹೀಗೆ ಹಲವಾರು ರೀತಿಯಲ್ಲಿ ಈ ಕನ್ನಡ ಸಾಹಿತ್ಯವಾಹಿನಿ ನಿರಂತರವಾಗಿ, ಪ್ರವಾಹವಾಗಿ ಹರಿಯುತ್ತಾ ಬಂದಿದೆ. ಈ ಹಿನ್ನೆಲೆಯಲ್ಲಿ "ಕಲಬುರಗಿ ಜಿಲ್ಲೆಯ ಆಧುನಿಕ ಸಾಹಿತ್ಯ: ಒಂದು ಅಧ್ಯಯನ" ಎಂಬ ವಿಷಯದ ಮೇಲೆ ಸಂಶೋಧನೆ ಮಾಡುವುದು ಅರಿತು ಈ ಅಧ್ಯಯನವನ್ನು ತುಂಬ ಅವಶ್ಯವಾದದು ಮತ್ತು ಉಪಯುಕ್ತವಾದದು ಎಂಬುದು ಕೈಗೊಂಡಿದ್ದೇನೆ.

ಅಧ್ಯಾಯ: ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಯನದ ಉದ್ದೇಶ

ಕಲಬುರಗಿ ಜಿಲ್ಲೆಯ ಆಧುನಿಕ ವಚನಸಾಹಿತ್ಯ ಎಂಬ ಅಧ್ಯಯನದ ಮುಖ್ಯ ಉದ್ದೇಶ ವೆಂದರೆ ವಿನೂತನ ಆಯಾಮವನ್ನು ಆಧುನಿಕ ವಚನ ಸಾಹಿತ್ಯವು ಕನ್ನಡ ಸಾಹಿತ್ಯಲೋಕಕ್ಕೆ ಒಂದು ದೊರಕಿಸಿಕೊಟ್ಟ ಮಹತ್ವದ ಸಾಹಿತ್ಯವಾಗಿದೆ. ೧೨ ನೇ ಶತಮಾನದಲ್ಲಿ ಪ್ರಾರಂಭಗೊಂಡ ಬಸವಾದಿ ಶರಣರ ವಿಚಾರಗಳಾದ ಅರಿವು, ಆಚಾರ, ಕಾಯಕ, ಗುರು–ಲಿಂಗ–ಜಂಗಮ, ಭಕ್ತಿ, ಸಮಾನತೆ, ದಾಸೋಹ, ದೇವರು, ಡಾಂಭಿಕತೆ ಮುಂತಾದ ಅಂಶಗಳು ಹಾಗೂ ವಚನಗಳ ಪ್ರಭಾವ ಮತ್ತು ಪ್ರೇರಣೆ ಕಲಬುರಗಿ ಜಿಲ್ಲೆಯ ಆಧುನಿಕ ವಚನಕಾರರ ಮೇಲಾಗಿದೆ. ಅಷ್ಟೇ ಅಲ್ಲದೇ ಸ್ತ್ರೀ–ಪುರುಷರೆಂಬ ಭೇದ–ಭಾವವಿಲ್ಲದೆ ಸ್ವತಂತ್ರವಾಗಿ ತಮ್ಮ ನೋವು, ನಲಿವು, ಭಕ್ತಿ, ಛಲ, ಆತ್ಮ ವಿಮರ್ಶೆ ಮತ್ತು ಸಮಾಜ ಎಡಂಬನೆ, ಮೂಢನಂಬಿಕೆ, ಅಂಧಶ್ರದ್ಧೆಗಳ ಬಗ್ಗೆ ತಮ್ಮ ಕಾಳಜಿ, ಆಕ್ರೋಶಗಳನ್ನು ತಮ್ಮ ವಚನಗಳಲ್ಲಿ ವ್ಯಕ್ತಪಡಿಸಿದ್ದಾರೆ.

ವಚನದ ಕೊನೆಯಲ್ಲಿ ತಮ್ಮ ಅಭಿವ್ಯಕ್ತಿಗಳಿಗೆ ನನ್ನ ಆರಾಧ್ಯ ದೈವವೇ ಸಾಕ್ಷಿಯೆಂದು ಕೆಲವರು ಹೇಳಿದರೆ ಇನ್ನೂ ಕೆಲವರು ನನ್ನ ವಚನಗಳಿಗೆ ನಾನೇ ಸಾಕ್ಷಿ ಎಂದು ನುಡಿದಿದ್ದಾರೆ. ತಮ್ಮ ಹೆಸರನ್ನೆ ಅಂಕಿತವಾಗಿಟ್ಟರು. ಇವರ ಅನುಕರಣೆಯೇ ಇಂದಿನ ಕಲಬುರಗಿ ಜಿಲ್ಲೆಯ ಆಧುನಿಕ ವಚನಕಾರರಲ್ಲಿಯೂ ಸಹಕರಡು ಬರುತ್ತದೆ. ಈ ದಿಸೆಯಲ್ಲಿ ವಚನಕಾರರು ಸಾಹಿತ್ಯ ಕ್ಕಾಗಿ ವಚನ ಸಾಹಿತ್ಯ ರಚಿಸಲಿಲ್ಲ. ಅದು ಮನುಕುಲದ ಒಳಿತನ್ನು ಸಾಧಿಸುವ ಅವರ ಪ್ರಯತ್ನ ದಲ್ಲಿ ವಚನ ಸಾಹಿತ್ಯ ಮಾಧ್ಯಮವಾಯಿತು. ಮುಂದೆ ವಚನ ಸಾಹಿತ್ಯ ಒಂದು ಧರ್ಮದ ಶಕ್ತಿ ಯಾಗಿ ಬೆಳೆಯಿತು. ಹೀಗಾಗಿ ಮುಂದ ಆದಾನಿಕ ವಚನ ಸಾಹಿತ್ಯವು ಆಧುನಿಕ ಯುಗದಲ್ಲಿ ಸಂಪದ್ಭರಿತವಾಗಿ ಬೆಳೆಯುತ್ತಿರುವ ಆಧುನಿಕ ವಚನ ಸಾಹಿತ್ಯಕ್ಕೆ ಕಲಬುರಗಿ ಜಿಲ್ಲೆಯ ಕೊಡುಗೆ ಅತ್ಯಂತ ಅಮೂಲ್ಯವಾದದ್ದು ಈ ಹಿನ್ನೆಲೆಯಲ್ಲಿ ಕಲಬುರಗಿ ಜಿಲ್ಲೆಯ ಆಧುನಿಕ ವಚನಕಾರರು ಸಾವಿರಾರು ವಚನಗಳನ್ನು ರಚಿಸಿ, ಆಧುನಿಕ ವಚನ ಸಾಹಿತ್ಯದಲ್ಲಿ ಜಾತಿ, ಮತ, ಪಂಥಗಳೆಂಬ ಭೇದವಿಲ್ಲದೆ ಸರ್ವತೋಮುಖವಾಗಿ ಬೆಳೆಯುತ್ತಿರುವುದು ಸಂತೋಷದ ಸಂಗತಿ.

ವ್ಯಾಪ್ತಿ

ಕನ್ನಡ ಸಾಹಿತ್ಯದಲ್ಲಿ ೧೨ ನೇ ಶತಮಾನ ರಚನೆಯಾದ ವಚನ ಸಾಹಿತ್ಯ ಹೊಸ ಮಾರ್ಗವನ್ನ ಸೃಷ್ಟಿಸಿತು. ವಚನಕಾರರು ಮೂಲತ ಸಮಾಜೋಧಾರ್ಮಿಕ ಸುಧಾರಣೆಗೆ ಮುಂದಾಗಿ ಜನಸಾಮಾನ್ಯರಿಗೆ ಅರಿವು ಮೂಡಿಸಲು ಕನ್ನಡದಲ್ಲಿ ವಚನಗಳನ್ನು ಬರೆದರು ಅದೇ ಮುಂದೆ ದೊಡ್ಡ ಸಾಹಿತ್ಯ ಮಾರ್ಗವಾಗಿ ರೂಪಗೊಂಡುದ್ದನ್ನು ಕಾಣುತ್ತೇವೆ. ಅಷ್ಟೇ ಅಲ್ಲದೆ, ಅವರ ವಚಗಳು ಜನಸಾಮಾನ್ಯರ ಮತ್ತು ಸಮಾಜಕ್ಕೂ ಹತ್ತಿರವಾಗುವಂತಹ ಭಾಷೆಯನ್ನು ಬಳಸಿಕೊಂಡು ಸರ್ವರೂ ತಿಳಿದುಕೊಳ್ಳುವ ಹಾಗೆ ರಚಿಸಿದರು. ಮುಂದೆ ಇವರ ಪ್ರಭಾವ ಎಲ್ಲಾ ಕವಿಗಳ ಸಾಹಿತಿಗಳ ಮೇಲಾಗಿದೆ. ಇಂದಿನ ವಚನ ಸಾಹಿತ್ಯದ ಮೇಲೆ ಪ್ರಾಚೀನ ವಚನ ಸಾಹಿತ್ಯದ ಪ್ರಭಾವ ಬೀರಿದೆ. ಅವರ ಪ್ರಭಾವ ಪ್ರೇರಣೆಯಿಂದ ಆಧುನಿಕ ಕಾಲದಲ್ಲಿ ವಚನಕಾರರು ವಚನಗಳನ್ನು ರಚಿಸಿದರು.

ಹೀಗಾಗಿ ಕಲಬುರಗಿ ಜಿಲ್ಲೆಯ ಆಧುನಿಕ ವಚನಕಾರರ ವ್ಯಾಪ್ತಿ ವಿಸ್ತಾರವಾಗಿದೆ ಎಂಬುದನ್ನು ಸ್ಪಷ್ಟಪಡಿಸುತ್ತ ಈ ಅಧ್ಯಯನದಲ್ಲಿ ಆಧುನಿಕ ವಚನಕಾರರ ವೈಯಕ್ತಿಕ ಜೀವನದ ವಿವರಕ್ಕಿಂತ ಅವರ ವಚನಗಳ ಮೂಲಕ ಅವರು ಕನ್ನಡ ಸಾಹಿತ್ಯಕಷ್ಟೇ ಏಕೆ? ವಿಶ್ವ ಸಾಹಿತ್ಯಕ್ಕೆ ನೀಡಿದ ಇವರ ಸಂದೇಶ ಮತ್ತು ಅನುಪಮ ಕೊಡುಗೆಗಳನ್ನು ಈ ಅಧ್ಯಯನದ ವ್ಯಾಪ್ತಿಯಲ್ಲಿ ಅಳವಡಿಸಲಾಗಿದೆ.

ಅಧ್ಯಾಯ: ೨
ವಚನ ಸಾಹಿತ್ಯದ ಪರಂಪರೆ

ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯದ ಪರಂಪರೆಯು ಉಜ್ವಲ ಯುಗವಾಗಿ ಕ್ರಾಂತಿಯುಗವಾಗಿ ಬೆಳೆದು ಬಂದಿರುವುದು ಸತ್ಯವಾಗಿದೆ. ಇದು ೧೨ನೇ ಶತಮಾನದ ಶರಣರ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಚಳುವಳಿಯು ಜಾಗತಿಕ ಇತಿಹಾಸದಲ್ಲಿ ಒಂದು ಅಪೂರ್ವ ಘಟನೆಯಾಗಿದೆ ಹಾಗೂ ಈ ಸಾಹಿತ್ಯಕ ಸೃಷ್ಟಿ ನಿಜಕ್ಕೂ ಅನನ್ಯವಾದುದು. ವರ್ಗ, ವರ್ಣ, ಜಾತಿ, ಮತ, ಪಂಥ ಲಿಂಗಬೇದಗಳೆಲ್ಲ ದೂರೀಕರಿಸಿ. ಸಕಲ ಸಮುದಾಯವನ್ನೂ ಒಂದು ಕಡೆ ತಂದು ನಿಲಿಸಿದ ಸುವರ್ಣಕಾಲ ಸಾಹಿತ್ಯವಾಗಿದೆ.

ಪ್ರಥಮವಾಗಿ ವಚನ ಸಾಹಿತ್ಯದ ಆದ್ಯ ವಚನಕಾರನಾದ ಜೇಡರ ದಾಸಿಮಯ್ಯನಿಂದ ಪ್ರಾರಂಭಗೊಂಡು ಸತ್ವ ಪೂರ್ಣ ಸಾಹಿತ್ಯ ಪ್ರಕಾರವಾಗಿ ಅತ್ಯಂತ ಮಹತ್ವದ ಪರಂಪರೆಯನ್ನು ಹೊಂದಿದೆ. ಅಷ್ಟೇ ಅಲ್ಲದೇ ಇದು ವ್ಯಕ್ತಿ ಕಲ್ಯಾಣ, ಸಮಾಜ ಕಲ್ಯಾಣ ಹಾಗೂ ಲೋಕ ಕಲ್ಯಾಣ ಚಳುವಳಿಯ ಸೃಷ್ಟಿ ಎನಿಸಿದ ಇವು ಜಾಗತೀಕ ಸಾಹಿತ್ಯದ ಮಹತ್ವಪೂರ್ಣ ಭಾಗವಾಗಿದೆ. ಇವು ಆಚಾರ್ಯ ಸಾಹಿತ್ಯವಾಗದೇ ಅನುಭಾವ ಸಾಹಿತ್ಯವಾಗಿದೆ ಎಂದು ಹೇಳಲಾಗುತ್ತದೆ. ವಚನ ಸಾಹಿತ್ಯ ಪರಂಪರೆಯು ಬೆಳೆದು ಬಂದದನ್ನು ನಾಲ್ಕು ಯುಗದಲ್ಲಿ ಕಾಣಬಹುದಾಗಿದೆ. ೧) ಬಸವಪೂರ್ವಯುಗ ೧೧ನೇ ಶತಮಾನ (೨) ಬಸವಯುಗ ೧೩ನೇ ಶತಮಾನ ೩) ಬಸವೋತ್ತರಯುಗ ೧೫, ೧೬ನೇ ಶತಮಾನ ೪)ಆಧುನಿಕ ಯುಗ ೨೦, ೨೧ನೇ ಶತಮಾನ ಈ ನಾಲ್ಕು ಯುಗಗಳಲ್ಲಿ ವಚನ ಸಾಹಿತ್ಯ ಪರಂಪರೆಯನ್ನು ಹೊಂದಿದೆ.

ಈ ಹಿನ್ನೆಲೆಯಲ್ಲಿ ವಚನ ಸಾಹಿತ್ಯದಲ್ಲಿ ಪ್ರಮುಖ ವಚನಕಾರರು ಹಾಗೂ ವಚನಕಾರ್ತಿಯರನ್ನು ಈ ಕೆಳಗಿನಂತೆ ಕಾಣಬಹುದಾಗಿದೆ. ಜೇಡರದಾಸಿಮಯ್ಯ, ಬಸವಣ್ಣ, ಅಲ್ಲಮಪ್ರಭು, ಚನ್ನಬಸವಣ್ಣ, ಸಿದ್ದರಾಮ, ಅಂಭಿಗರ ಚೌಡಯ್ಯ, ಮಡಿವಾಳ ಮಾಚಿದೇವ, ನುಲಿಯ ಚಂದಯ್ಯ ಉರಿಲಿಂಗ ಪೆದ್ದಿ, ಆಯ್ದುಕ್ಕಿ ಮಾರಯ್ಯ, ಹಡಪದ ಅಪ್ಪಣ್ಣ, ಅಕ್ಕಮಹಾದೇವಿ, ಮುಕ್ತಾಯಕ್ಕ, ನಾಗಲಾಂಬಿಕೆ, ಆಮುಗೆ ರಾಯಮ್ಮ, ಆಯ್ದಕ್ಕಿ ಲಕ್ಕಮ್ಮ, ಮೂಳಿಗೆ ಮಾದೇವಿ, ಕಾಳವೆ ಲಿಂಗಮ್ಮ ಮತ್ತು ಸತ್ಯಕ್ಕ ಮುಂತಾದವರನ್ನು ಪ್ರಮುಖವಾಗಿ ವಚನ ಸಾಹಿತ್ಯ ಪರಂಪರೆಗೆ ಹೆಸರಿಸ ಬಹುದಾಗಿದೆ ಎಂದು ಅಧ್ಯಾಯನದಲ್ಲಿ ಸಂಗ್ರಹಿಸಲಾಗಿದೆ.

ಅ. ಪ್ರಾಚೀನ

ಆ. ಆಧುನಿಕ

ಅ. ಪ್ರಾಚೀನ:

ಪ್ರಾಚೀನ ವಚನ ಸಾಹಿತ್ಯದ ಪರಂಪರೆ ಇಡೀ ಕನ್ನಡ ಸಾಹಿತ್ಯದ ದಿಕ್ಕು-ದಿಸೆಯನೇ ಬದಲಾಯಿಸಿತ್ತು. ಅಷ್ಟೇ ಅಲ್ಲದೆ ಈ ಹಿಂದೆ ಇದ್ದ ವಾಗ್ಮಯ ಲೋಕದ ಚಿಂತನಾ ಲಹರಿಯ ದಿಕ್ಕನು ಬದಲಾಯಿಸಿತ್ತು. ಈ ಹಿಂದಿನ ವಾಗ್ಮಯ ಕೇವಲ ಧರ್ಮ, ದೇವರು, ಮೌಢ್ಯ ಮುಂತಾದ ವರ್ಣನೆಗಳು ಬೃಹತ್ ಕಾವ್ಯವಾಗಿ ಹೊರಹೊಮ್ಮಿದವು. ಜನ ಸಾಮಾನ್ಯ ಬದುಕಿನ ದಾರಿದ್ರತೆ, ಪಾತಿವ್ರತ್ಯ ಅತಂತ್ರತೆ ಬಗ್ಗೆ ಅಂದು ಮಾತನಾಡದೆ ಹೋದಾಗ ೧೨ ನೇ ಶತಮಾನದ ವಚನಕಾರರ ದೃಷ್ಟಿ ಜನಸಾಮಾನ್ಯರ ಬದುಕಿನ ಬವಣೆ, ಬೆಗೆ ಅವರ ಅಂತರಂಗದ ತಲ್ಲಣ ಮತ್ತು ತವಕಗಳು, ಸ್ವಾತಂತ್ರ್ಯಡೆಗೆ ಮಿಡಿಯುವ ಅವರ ಮನಸ್ಸು ಕನಸು ಇವುಗಳೆಲ್ಲವು ವಚನಗಳಲ್ಲಿ ವ್ಯಕ್ತಗೊಂಡವು ಎಂದು ಹೇಳಲಾಗಿದೆ.

ಬ. ಆಧುನಿಕ:

ಆಧುನಿಕ ವಚನ ಸಾಹಿತ್ಯ ಮುಂದುವರಿಕೆ ಆದರು ಸಹ ಇಲ್ಲಿ ಸಾಹಿತ್ಯದ ರಚನೆಗೆ ಶಿವಶರಣರ ವಚನಗಳ ರಚನೆಗೆ ಪ್ರೇರಣೆಯಾಗಿವೆ. ಆಧುನಿಕ ಬದುಕು, ಶಾಂತಿ, ನೆಮ್ಮದಿ, ಸತ್ಯ, ನ್ಯಾಯ ಮತ್ತು ನಿಷ್ಠೆಗಳಿಂದ ಬದುಕಾಗಿದೆ. ಹಾಗಾಗಿ ದೈನಂದಿನ ಬದುಕಿನ ಶಾಂತಿ, ಶ್ರಮದಾನ,

ಅನ್ಯಾಯ, ಅನೀತಿ, ದಬ್ಬಾಳಿಕೆ ಮತ್ತು ಶೋಷಣೆಯಿಂದ ಮುಕ್ತಗೊಳುವ ಮಾರ್ಗಗಳು ಆಧುನಿಕ ವಚನ ಸಾಹಿತ್ಯದಲ್ಲಿ ಕಾಣುತ್ತೇವೆ.

ಅಧ್ಯಾಯ: ೩

ಆಧುನಿಕ ವಚನಕಾರರ ಆಶಯ ಹಾಗೂ ಧೋರಣೆ

ಆಧುನಿಕ ವಚನಕಾರರು ವಚನ ರಚಿಸಲು ಅವರಿಗೆ ಬಹುಮುಖ್ಯ ಪ್ರೇರಣೆ ಎಂದರೆ ೧೨ನೇ ಶತಮಾನದ ವಚನಕಾರರ ಹಾಗೂ ವಚನಕಾರ್ತಿಯರ ಜೀವನ ಸಾಧನೆ ಮತ್ತು ವಚನ ರಚನೆಗಳು ಅವರ ಮೇಲೆ ಪ್ರಭಾವ ಬೀರಿದೆ.

೧೨ ನೇ ಶತಮಾನದ ವಚನಕಾರರ ದೃಷ್ಟಿ ಸಮಾಜದಲ್ಲಿ ತುಂಬಿದ ಅಜ್ಞಾನ ಅಂಧಕಾರ ಅಸಮಾನತೆಯನ್ನು ನಿರ್ಮೂಲನೆಗೊಳಿಸಿ ನವಸಮಾಜದ ನಿರ್ಮಾಣ ಅವರ ಆಸೆಯಾಗಿತ್ತು ಜೊತೆಗೆ ಸಾಮಾಜಿಕ ಬದಲಾವಣೆ ಅವರ ಬಹುಮುಖ್ಯ ಧೋರಣೆಯಾಗಿತ್ತು.

ಆದರೆ ಆಧುನಿಕ ವಚನಕಾರರ ಆಶಯ ಮತ್ತು ಧೋರಣೆ ಪ್ರಾಚೀನ ವಚನಕಾರರಂತೆ ಸಾಗಿದೆ. ಸ್ವಲ್ಪ ವಿಭಿನ್ನ ರೀತಿಯಲ್ಲಿ ಸಾಗಿರುವುದನ್ನು ಇಲ್ಲಿ ಗಮನಿಸಬೇಕಾಗಿದೆ.

ಮತಧರ್ಮಪ್ರಚಾರ, ಭಕ್ತಿ, ನೀತಿ, ಸದಾಚಾರಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟರು. ಆದರೆ ಇಲ್ಲಿ ಲೌಕಿಕ ನೆಲೆಗಟ್ಟಿನ ಮೇಲೆ ಅನೇಕ ವಚನಗಳನ್ನು ರಚಿಸಿದ್ದಾರೆ. ಆಧುನಿಕ ವಚನಕಾರರಲ್ಲಿ ಜ.ಚ.ನಿ ಮಾದೇವ ಬಣಕಾರ ಕೆಲವರನ್ನು ಬಿಟ್ಟು ಉಳಿದವರಾರು ಧರ್ಮ, ತತ್ವಗಳ ಪ್ರಚಾರ ಗಳನ್ನು ಕುರಿತು ಬರೆದಿಲ್ಲ. ಸಮಕಾಲೀನ ಸಮಾಜದಲ್ಲಿನ ನಾನಾ ಸಮಸ್ಯೆಗಳಿಗೆ ಸ್ಪಂಧಿಸುವುದೇ ಆಗಿದೆ. ಅದರಲೂ ಸಿದ್ದಯ್ಯ ಪುರಾಣಿಕ, ಎಸ್.ವಿ.ಪರಮೇಶ್ವರ ಭಟ್ಟ, ಸಂಗಮೇಶ ಹೊಸಮನಿ, ಕುಮಾರ ಕಕ್ಕಯ್ಯ ಪೋಳ ಮುಂತಾದವರ ವಚನಗಳನ್ನು ಗಮನಿಸಿದ್ದಾಗ ಆಧುನಿಕ ವಿದ್ಯ ಮಾನಗಳಿಗೆ ಇವರ ವಚನಗಳು ಮಹತ್ವವಾಗಿವೆ. ಹೀಗಾಗಿ ಆಧುನಿಕ ವಚನಕಾರರ ಆಶಯ ಹಾಗೂ ಧೋರಣೆ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಾಯ: ೪

ಕಲಬುರಗಿ ಜಿಲ್ಲೆಯ ಪ್ರಾಚೀನ ವಚನಕಾರರು ಆಧುನಿಕ ವಚನಕಾರರು

ಕಲಬುರಗಿ ಜಿಲ್ಲೆ ಕನ್ನಡ ನಾಡಿಗೆ ಹಾಗೂ ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅವಿಸ್ಮ ರಣೀಯವಾದದ್ದು ಅಪಾರವಾದುದು ವಿಶೇಷವಾಗಿ ಅದರಲ್ಲೂ ಈ ಜಿಲ್ಲೆಯು ವಚನ ಸಾಹಿತ್ಯಕ್ಕೆ ಅಪೂರ್ವ ಕೊಡುಗೆಯನ್ನು ನೀಡಿದೆ. ವಚನ ಸಾಹಿತ್ಯ ಪ್ರಥಮವಾಗಿ ಉದಯ ವಾದುದೇ ಕಲಬುರಗಿ ಜಿಲ್ಲೆಯ ಸುರಪುರ ತಾಲೂಕಿನ ಮುದುನೂರಿನಲ್ಲಿ ಜನಿಸಿದ ಜೇಡರ ದಾಸಿ ಮಯ್ಯನ ವಚನವು ಕನ್ನಡ ನಾಡಿಗೆ ಕಾಣಿಕೆಯಾಗಿ ನೀಡಿದನು. ನಂತರ ಗಜೇಶ ಮಸಣಯ್ಯ ಹಾಗೂ ಆತನ ಪತ್ನಿ ಮಸಣಮ್ಮ, ದುಗ್ಗಳೆ ಏಕಾಂತರಾಮಿ ತಂದೆ, ಏಲೇಶ್ವರ ಕೇತಯ್ಯ, ನಿಜಗುಣಯೋಗಿ, ಷಣ್ಮುಖಶಿವಯೋಗಿ, ಸಗರದ ಬೊಮ್ಮಣ್ಣ, ಕೆಂಭಾವಿ ಭೋಗಣ್ಣ, ಮತ್ತು ಕೊಡೆಕಲ್ಲ ಬಸವಣ್ಣ ಮುಂತಾದವರು ಪ್ರಾಚೀನ ವಚನಕಾರರಾಗಿ ಅನೇಕ ವಚನಗಳನ್ನು ರಚಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಹಾಗೆಯೇ ಮುಂದುವರೆದು ಕಲಬುರಗಿ ಜಿಲ್ಲೆಯ ಆಧುನಿಕ ವಚನಕಾರರು ಒಟ್ಟು ಇಪ್ಪತ್ತೈದಕ್ಕೂ ಹೆಚ್ಚು ಆಧುನಿಕ ವಚನಕಾರರೆಂದರೆ ಡಾ. ಶರಣಬಸಪ್ಪ ಅಪ್ಪ, ಡಾ.ಶೈಲಜಾ

ಉಡಚಣ, ಡಾ. ಚೆನ್ನಣ್ಣ ವಾಲೀಕಾರ, ಶ್ರೀಮತಿ ವಾಗ್ದೇವಿ ಪಾಟೀಲ, ಡಾ. ಜಯಶ್ರೀ ದಂಡೆ, ಡಾ. ಸರಸ್ವತಿ ಚಿಮ್ಮಲಗಿ, ಡಾ. ಎಸ್.ಎಸ್. ಪಾಟೀಲ, ಶ್ರೀ ಸಿದ್ದರಾಮ ಪೊಲೀಸ ಪಾಟೀಲ, ಶ್ರೀ ಭೀಮರಾವ, ಶ್ರೀ ವಿಜಯಕುಮಾರ ಪರುತೆ, ಶ್ರೀ ವಿಜಯಕುಮಾರ ಬಡಿಗೇರ, ಶ್ರೀ ಗುರುಲಿಂಗಪ್ಪ ಹಾಲಹಳ್ಳಿ, ಶ್ರೀ ಹಣಮಂತರಾವ ಮೊತಕಪಳಿ, ಡಾ. ಬಸವರಾಜ, ವಿ.ಮೋದಿ, ಪ್ರೊ. ಸೂಗಯ್ಯ ಹಿರೇಮಠ, ಡಾ. ಪ್ರಭು ಖಾನಪರೆ, ಶಿವಶಾಂತರಡ್ಡಿ, ಡಾ. ವಿಜಯ ಶ್ರೀ ಸಬರದ ಮುಂತಾದವರು ಮುಖ್ಯವಾಗಿ ಪ್ರಸ್ತುತ ಬರಹದಲ್ಲಿ ಪ್ರಕಟಿತ ಕಲಬುರಗಿ ಜಿಲ್ಲೆಯ ಆಧುನಿಕ ವಚನ ಸಂಕಲನ್ನಾಧರಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಾಯ: ೫

ಕಲಬುರಗಿ ಜಿಲ್ಲೆಯ ಆಧುನಿಕ ವಚನ ಸಾಹಿತ್ಯದ ವಿವೇಚನೆ

ಅ. ವಸ್ತು

ಇ. ತಂತ್ರ

ಈ. ಸಾಹಿತ್ಯಕ ಮೌಲ್ಯ

ಉ. ಛಂದಸ್ಸು

ಊ. ಭಾಷೆ

ಋ. ಸಾಂಸ್ಕೃತಿಕ ಮೌಲ್ಯ

ಕಲಬುರಗಿ ಜಿಲ್ಲೆಯ ಆಧುನಿಕ ವಚನ ಸಾಹಿತ್ಯವು ತುಂಬಾ ವಿಸ್ತಾರಗೊಂಡಿದೆ ಎಂದು ಹೇಳಬೇಕಾಗುತ್ತದೆ. ಅನೇಕ ವಚನಕಾರರು ಮತ್ತು ವಚನಕಾರ್ತಿಯರು ವಚನ ರಚನೆಯಲ್ಲಿ ತೊಡಗಿರುವುದನ್ನು ಕಾಣಬಹುದಾಗಿದೆ. ವಿವಿಧ ವೃತ್ತಿಯ ನೌಕರಸ್ಥರು, ಮಠಾಧೀಶರು, ಶಿಕ್ಷಕರು, ಶರಣರು, ಸಂತರು ವಚನ ರಚನೆಯಲ್ಲಿ ತೊಡಗಿದ್ದಾರೆ. ಹಾಗಾಗಿ ಇಲ್ಲಿಯ ವಚನ ವಿವೇಚನೆಯ ರೀತಿ ನೀತಿ ವಿಭಿನ್ನವಾದ ದೃಷ್ಟಿಕೋನ ಹೊಂದಿದೆ.

ಅ. ವಸ್ತು

ಆಧುನಿಕ ವಚನಕಾರರ ಬಹು ಮುಖ್ಯವಾದ ವಸ್ತು ಜನರ ದೈನಂದಿನ ಬದುಕಿನ ಆಗು-ಹೋಗು ಬಗೆಗಿನ ವಿವೇಚನೆಯೇ ಆಗಿದೆ. ಹಾಗಾಗಿ ಜನಸಾಮಾನ್ಯರಿಗೆ ಅರ್ಥವಾಗುವ ವಿಷಯ ವಸ್ತುವನ್ನು ಆಯ್ದುಕೊಂಡು ಇವರ ವಚನ ರಚನೆಯಲ್ಲಿ ತೊಡಗಿರುವುದನ್ನು ಕಾಣುತ್ತೇವೆ.

ಹಣದ ಆಮಿಷ, ಅಧಿಕಾರದ ದರ್ಪ ಸಮಾಜದ ಅನೀತಿ, ಅತ್ಯಾಚಾರ, ಅನ್ಯಾಯ, ಹದಗೆಟ ಶಾಂತಿ ಸುವ್ಯವಸ್ಥೆ ಬಡತನ ಮತ್ತು ಅನಕ್ಷರತೆ ಜನಸಂಖ್ಯೆ ಪರಿಣಾಮ ಹೀಗೆ ಅನೇಕ ವಿಷಯಗಳು ಇವರ ಕಾವ್ಯದ ವಸ್ತುಗಳಾಗಿವೆ. ಅಷ್ಟೇ ಅಲ್ಲದೇ ಧರ್ಮ, ಆಧ್ಯಾತ್ಮಿಕ, ಕಾಯಕ ಮತ್ತು ದಾಸೋಹದ ವಿಷಯಗಳೂ ಒಳಗೊಂಡಿವೆ.

ಆ. ಶೈಲಿ:

ಕಲಬುರಗಿ ಜಿಲ್ಲೆಯ ವಚನಕಾರರ ಶೈಲಿಯು ಪುರಾತನ ವಚನಕಾರರಿಗಿಂತ ವಿಭಿನ್ನವಾಗಿದೆ ಎಂದು ಹೇಳಬಹುದು. ಏಕೆಂದರೆ ಕಂದ, ತ್ರಿಪದಿ, ಷಟ್ಪದಿ ಮತ್ತು ರಗಳ ಪ್ರಕಾರಗಳ ಬಳಕೆ ಆಗಿರುವುದು ಕಾಣಿಸುತ್ತದೆ. ಆಧುನಿಕತೆಯಲ್ಲಿ ಬಹಳ ಸರಳ ಶೈಲಿಯ ಅಳವಡಿಕ್ಕೆ ಅವರ ವಚನ ರಚನೆಯಲ್ಲಿ ಕಾಣುತ್ತೇವೆ. ಆಧುನಿಕ ವಚನಗಳು ಕವನಗಳಂತೇ ಕಾಣಿಸಿದ್ದರು ಸಹ ಇವುಗಳ ಶೈಲಿ ಆಧುನಿಕತೆಯಡೆಗೆ ಆಧುನಿಕರಿಗೆ ವಚನ ವಿಚಾರದ ಅರಿವು ತಿಳಿಸುವ ಶೈಲಿ ಅರ್ಥವಾಗುವ ಪರಿ ಇಲ್ಲಿ ಕಾಣಬಹುದು.

ಇ. ತಂತ್ರ:

ತಂತ್ರ ಎಂದರೆ ವಸ್ತು ಮತ್ತು ರೂಪ ಎರಡರ ನಡುವಿನ ವೈಶಿಷ್ಟ್ಯವೆಂದು ಕರೆಯುತ್ತಾರೆ. ಇಲ್ಲಿ ವಚನಗಳ ತಂತ್ರ ಓದುಗ ಎಲ್ಲರನ್ನು ಒಳಗೊಂಡಿರುವ ಪ್ರಕ್ರಿಯೆ ಆಗಿದೆ. ಅದೇ ರೀತಿಯಾದ ತಂತ್ರವು ಆಧುನಿಕ ವಚನಕಾರರಲ್ಲಿ ಬಳಕೆಗೊಂಡಾಗ ಮಾತ್ರ ಅದು ಹೃದಯದಲ್ಲಿ ನಿಂತುಕೊಂಡು ಒಂದು ಸಾಂದರ್ಭಿಕ ಸನ್ನಿವೇಶ ಸೃಷ್ಟಿಗೊಂಡು ಮಾನವೀಯತೆಯ ಮೆರಗು ಹೆಚ್ಚಿಸಿ ಕಾವ್ಯದ ಸತ್ವ ಮತ್ತು ತತ್ವ ಜೀವಂತವಾಗಿಡುತ್ತದೆ. ಅಂತಹ ತಂತ್ರಗಳು ಇಲ್ಲಿ ಬಳಕೆ ಆಗಿರುವುದನ್ನು ಆಧುನಿಕ ವಚನ ಸಾಹಿತ್ಯದಲ್ಲಿ ಕಾಣುತ್ತೇವೆ.

ಇ. ಸಾಹಿತಿಕ ಮೌಲ್ಯ:

ಕಲಬುರಗಿ ಜಿಲ್ಲೆಯು ಆಧುನಿಕ ವಚನಕಾರರ ವಚನಗಳ ವಿವೇಚನೆ ಬಹಳ ಮಹತ್ವದಾಗಿದೆ. ಮತ್ತು ಸಾಹಿತ್ಯಕ ಮೌಲ್ಯವನ್ನು ಒಳಗೊಂಡಿದೆ. ಏಕೆಂದರೆ ಮೌಲ್ಯವಿಲ್ಲದ ಸಾಹಿತ್ಯ ಬಹುಕಾಲ ಬಾಳಿಕೆ ಬರುವುದಿಲ್ಲ. ಹಾಗಾಗಿ ವಚನ ಸಾಹಿತ್ಯದ ಮೌಲ್ಯ ದೀರ್ಘಕಾಲವಾಗಿ ಉಳಿಯುತ್ತದೆ. ಅಂತಹ ಸಾಹಿತ್ಯಕ್ಕೆ ಮೌಲ್ಯ ಅದಕ್ಕೆ ಇದೆ. ಹಾಗಾಗಿಯೇ ಸಾಮಾನ್ಯ ಓದುಗನನ್ನು ಕೂಡ ಅನಕ್ಷರಸ್ಥರು ಕೂಡ ವಾಚಿಸಬಹುದು ಸರ್ವರ ಸಾಹಿತ್ಯದ ಅದರಲ್ಲು ವಚನ ಸಾಹಿತ್ಯದ ಸಾಹಿತ್ಯಕ ಮೌಲ್ಯ ಕಲಬುರಗಿ ಜಿಲ್ಲೆಯ ವಚನಕಾರರ ವಚನಗಳಲ್ಲಿ ಕಾಣಿಸುತ್ತದೆ.

ಈ. ಛಂದಸ್ಸು:

ಛಂದಸ್ಸು ಒಳಗೊಂಡ ವಚನ ಸಾಹಿತ್ಯದ ವಿಚಾರವು ಕಲಬುರಗಿ ಜಿಲ್ಲೆಯ ಆಧುನಿಕ ವಚನಕಾರರಲ್ಲಿ ಅತಿ ಕಡಿಮೆ ಬಳಕೆಯನ್ನು ಕಾಣುತ್ತೇವೆ. ಆಧುನಿಕ ಕಾವ್ಯ ಪ್ರಕಾರದ ದಟ್ಟ ಪ್ರಭಾವ, ಅಧ್ಯಯನದ ಕೊರತೆ, ಆಧುನಿಕತೆಯ ರೀತಿ–ನೀತಿ, ಓದುಗ–ಲೇಖಕ, ಚಿಂತಕ–ವಿಮರ್ಶಕರ ರೀತಿ ಹೀಗೆ ವಿಭಿನ್ನ ಕಾರಣಗಳಿಂದ ಛಂದಸ್ಸಿನ ಬಳಕೆ ಇಲ್ಲಿ ಕಾಣಸಿಗದ್ದು ಆದರೆ ಅದರ ಬಳಕೆ ಅಲ್ಲಲ್ಲಿ ಒಳಗೊಂಡಿರುವುದನ್ನು ಕಾಣುತ್ತೇವೆ. ಉದಾ: ತ್ರಿಪದಿ, ಚೌಪದಿ, ಕಂದ.

ಉ. ಭಾಷೆ:

ಬಹಳ ಸರಳವಾದ ಭಾಷೆಯ ಬಳಕೆಯ ಮೂಲಕ ವಚನ ರಚಿಸಿರುವುದನ್ನು ಕಾಣು ತ್ತೇವೆ. ಕನ್ನಡ ಭಾಷೆ ಬಳಕೆ, ದೇಸಿ ಕನ್ನಡ ಪದಗಳ ಬಳಕೆ ಕಂಡು ಬಂದರು ಸಹ ಹಲವಾರು ವಚನಕಾರರು ಸಂದರ್ಭಕ್ಕನುಗುಣವಾಗಿ ಇಂಗ್ಲಿಷ್ ಭಾಷೆಯ ಪದಗಳ ಪ್ರಯೋಗ ತಮ್ಮ ವಚನಗಳ ರಚನೆಯಲ್ಲಿ ಬಳಸಿರುವುದನ್ನು ಇಲ್ಲಿ ವಿವೇಚಿಸಬಹುದು. ಇಡೀ ಕನ್ನಡದ ಭಾಷೆಯ ಬಳಕೆಯೇ ಇಲ್ಲಿ ಕಾಣಸಿಗುವುದಿಲ್ಲ. ಆದರೆ ಅಲ್ಲಲ್ಲಿ ಪರಭಾಷೆಯ ಪದಗಳು ಸಾಗಿರುವುದನ್ನು

ಕಾಣುತ್ತೇವೆ. ಅಷ್ಟೇ ಗ್ರಂಥಸ್ಥ ಕನ್ನಡ ಭಾಷೆಯ ಬಳಕೆ ವಚನಗಳಲ್ಲಿ ಬಳಸಿಕೊಂಡರು ಸಹ ಗ್ರಾಮೀಣ ಜನಪದ ಶೈಲಿಯ ಭಾಷೆಯ ಬಳಕೆಯು ಅನೇಕ ವಚನಕಾರರ ವಚನಗಳಲ್ಲಿ ಕಾಣಸಿಗುತ್ತವೆ. ಹಾಗಾಗಿ ಬಹಳಷ್ಟು ಜನರಿಗೆ ಅರ್ಥವಾಗುವ ಭಾಷೆಯಲ್ಲಿ ವಚನಗಳ ರಚನೆ, ಸರಳತೆ ಪದಗಳ ನಿರಾಕರಣೆ ಇವೆಲ್ಲವು ಭಾಷೆ ಕಠಿಣವಾಗದೆ ವಚನವನ್ನು ಇನ್ನುಷ್ಟು ಸರಳಗೊಳೀಸಿ ತಿಳಿಹೇಳುವ ಪರಿ ಪರಿಶುದ್ಧವಾಗಿದೆ.

ಊ. ಸಾಂಸ್ಕೃತಿಕ ಮೌಲ್ಯ:

ವಚನಗಳ ಉದ್ದೇಶ ಮೌಲ್ಯಗಳ ಪ್ರತಿಪಾದನೆ ಆಧುನಿಕ ವಚನಕಾರರಲ್ಲಿ ಸಂಸ್ಕೃತಿಕ ಮೌಲ್ಯಗಳಿಂದ ಸಾಮಾಜಿಕ, ಧಾರ್ಮಿಕ, ಆರ್ಥಿಕ ಮತ್ತು ನೈತಿಕ ಮುಂತಾದವುಗಳ ಜೊತೆಗೆ ಸಂಸ್ಕೃತಿಕ ಮೌಲ್ಯದ ವಿವೇಚನೆ ಇಲ್ಲಿ ಬಹುಮುಖ್ಯವಾಗಿರುವುದನ್ನು ನಾವು ಕಾಣುತ್ತೇವೆ.

ಧರ್ಮ ಸಂಸ್ಕೃತಿಯ ವಿಚಾರ ಬಹಳ ಮಹತ್ವದು ಅಷ್ಟೇ ಅಲ್ಲದೆ ಸರ್ವಧರ್ಮಗಳ ಸಮನ್ವಯದ ನೆಲೆ ಬೀಡು ಇದಾಗಿದೆ. ಈ ನೆಲ ಹಾಗಾಗಿ ಇಲ್ಲಿಯ ಅನೇಕ ಸಂತರು ಸೂಫಿಗಳು ಸ್ವಾಮಿಗಳು ನೆಲೆಸಿರುವಂತ ನೆಲೆ ಕಲಬುರಗಿ ಜಿಲ್ಲೆಯಾಗಿದೆ. ಹಾಗಾಗಿ ಸಂಸ್ಕೃತಿ ಲೋಕದ ಹಿಂದೂ–ಮುಸ್ಲಿಂ ಭಾವೈಕ್ಯದ ಮನೋಭೂಮಿಕೆಯ ಈ ನೆಲದಲ್ಲಿ ಸಂಸ್ಕೃತಿ ಚಿಂತನೆ ಕುರಿತು ಹಲವು ವಚನಗಳು ರಚನೆಗೊಂಡಿರುವುದನ್ನು ನಾವು ಕಾಣುತ್ತೇವೆ. ಹಾಗಾಗಿ ಅನೇಕ ಹಿಂದು ಧರ್ಮದ ವಚನಕಾರರು ಅಷ್ಟೇ ಅಲ್ಲದೆ ಮುಸ್ಲಿಂ ಪಂಥದ ಅನೇಕ ಶರಣರು ಧಾರ್ಮಿಕ ಚಿಂತನೆಯ ವಚನಗಳನ್ನು ರಚಿಸಿದ್ದಾರೆ. ಉದಾ: ಎಲ್.ಬಿ.ಕೆ.ಅಲ್ಲಾಳ

ಅಧ್ಯಾಯ: ೬

ವಚನ ಸಾಹಿತ್ಯಕ್ಕೆ ಕಲಬುರಗಿ ಜಿಲ್ಲೆಯ ಕೊಡುಗೆ

ಸುದೀರ್ಘವಾದ ಕನ್ನಡ ಸಾಹಿತ್ಯದಲ್ಲಿ ಹಲವಾರು ಪ್ರಕಾರಗಳು ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮಟ್ಟದಲ್ಲಿ ಅಲ್ಲದೆ, ಅಂತರ ರಾಷ್ಟ್ರೀಯ ಮಟ್ಟದಲು ಸಾಹಿತಿಕ ಮೌಲ್ಯವನ್ನು ಗಟ್ಟಿಗೊಳಿಸಿದೆ. ಈ ಹಿನ್ನೆಲೆಯಲ್ಲಿ ದೇಶಿಯ ಪರಂಪರೆಯ ವಚನ ಸಾಹಿತ್ಯವು ಕನ್ನಡ ಸಾಹಿತ್ಯದ ಮೌಲ್ಯಯುತ್ತವಾದ ಶಕ್ತಿಯನ ಪ್ರವರಿಸಿದೆ. ಕನ್ನಡ ಸಾಹಿತ್ಯದ ಶ್ರೀಮಂತಿಕೆಯಲ್ಲಿ ವಚನ ಸಾಹಿತ್ಯವು ತನ್ನ ವಿಶಿಷ್ಟತೆಯನ್ನು ಮೆರೆದಿದೆ. ಈ ಸಾಹಿತ್ಯದಲ್ಲಿ ವ್ಯಕ್ತವಾದ ಸಾಮಾಜಿಕ, ಧಾರ್ಮಿಕ, ರಾಜಕೀಯ, ಸಾಹಿತಿಕ ಮೌಲ್ಯಗಳು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಹಾಸುಹೊಕ್ಕಾಗಿವೆ. ಈ ಸಾಹಿತ್ಯದಲ್ಲಿನ ಸರ್ವಕಾಲೀನ ಮೌಲ್ಯಗಳು ಕನ್ನಡ ಶ್ರೀಮಂತಿಕೆಗೆ ಸಾಕ್ಷಿಯಂತಿವೆ. ಇದರಂತೆ ಪ್ರಾದೇಶಿಕತೆಯಿಂದ ವಿಶಿಷ್ಟ ಸಂಸ್ಕೃತಿಕ ಮೌಲ್ಯವನ್ನು ಪ್ರತಿಪಾದಿಸುವ ಕಲಬುರಗಿ ಜಿಲ್ಲೆಯು ಜಾನಪದ ಸಾಹಿತ್ಯದೊಂದಿಗೆ ಆಧುನಿಕ ಸಾಹಿತ್ಯದಲ್ಲೂ ತನ್ನ ವಿಶಿಷ್ಟತೆಯನ್ನು ಮೆರೆದಿದೆ. ಈ ಪ್ರದೇಶದ ಹಸಿವು, ಬಡತನ, ನಿರುದ್ಯೋಗ, ಅನಕ್ಷರತೆ, ಅಸಹಾಯಕತೆ, ಅನ್ಯಭಾಷೆಗಳ ಪ್ರಭಾವ ಅನ್ಯಸಂಸ್ಕೃತಿಯ ದಬ್ಬಾಳಿಕೆ ಮೊದಲಾದವುಗಳನ್ನು ತನ್ನ ಒಡಲಲ್ಲಿರಿಸಿಕೊಂಡು ರೂಪಗೊಂಡ ಪ್ರತಿಪಾಧಿಸುತ್ತದೆ. ಈ ಹಿನ್ನೆಲೆಯಲ್ಲಿ ಆಧುನಿಕ ವಚನ ಸಾಹಿತ್ಯವು ಸರ್ವಕಾಲೀನ ಮೌಲ್ಯವನ್ನು ಕಲಬುರಗಿ ಜಿಲ್ಲೆಯ ಆಧುನಿಕ ವಚನ ಸಾಹಿತ್ಯವನ್ನು ಕನ್ನಡ ಸಾಹಿತ್ಯಲೋಕದಲ್ಲಿ ಗುರುತಿಸುವುದು ಅವಶ್ಯಕವಾಗಿದೆ. ಕನ್ನಡ ನಾಡಿನ ಹಲವಾರು ಜ್ವಲಂತ ಸಮಸ್ಯೆಗಳನ್ನು ಇಲ್ಲಿಯ ಸಾಹಿತ್ಯವು

ಮೈಗೂಡಿಸಿಕೊಂಡಿದೆ. ಆ ಮೂಲಕ ಕರ್ನಾಟಕ ಸಂಸ್ಕೃತಿಯ ಒಳಹುಗಳನ್ನು ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸುವುದು ಮುಖ್ಯವೆನಿಸುತ್ತದೆ. ಆಧುನಿಕ ಕನ್ನಡ ಸಾಹಿತ್ಯ ಕಲಬುರಗಿ ಆಧುನಿಕ ವಚನ ಸಾಹಿತ್ಯದಿಂದ ಶ್ರೀಮಂತಗೊಂಡಿರುವ ಅಂಶಗಳನ್ನು ಈ ಅಧ್ಯಾಯದಲ್ಲಿ ಅಧ್ಯಯನ ಕೈಗೊಳಲಾಗಿದೆ.

ಅಧ್ಯಾಯ: ೬

ಸಮಾರೋಪ

ವಚನ ಸಾಹಿತ್ಯ ಕನ್ನಡ ಸಾಹಿತ್ಯದ ಬಹುದೊಡ್ಡ ಸಾಂಸ್ಕೃತಿಕ ಸಂಪತ್ತು ಕನ್ನಡಿಗರು ವಿಶ್ವ ಸಾಹಿತ್ಯಕ್ಕೆ ವಿಶ್ವಜ್ಞಾನ ಭಂಡಾರಕ್ಕೆ ಕೊಟ್ಟ ಕಾಣಿಕೆ ವಚನ ಸಾಹಿತ್ಯದ ಮಾದರಿ ವಿಶ್ವಸಾಹಿತ್ಯದಲ್ಲಿ ಅಪರೂಪ ಇದು ಕರ್ನಾಟಕದ ಜನಸಾಮಾನ್ಯರ ಧ್ವನಿಯಾಗಿದೆ. ಇದು ಕನ್ನಡ ಮಾತಿನ ದೀಪ್ತಿ ಸಾಂಸ್ಕೃತಿಕ ಕ್ರಾಂತಿಯನ್ನು ಮೊಳಗಿಸುವುದಕ್ಕಾಗಿ ಶರಣರು ಆಯ್ದುಕೊಂಡು ಪ್ರಬಲ ಅಸ್ತ್ರ ನಡೆದಂತೆ ನುಡಿದ ಆತ್ಮ ಸಾಕ್ಷಿಯವಾಣಿ ವಚನವೆನಿಸುತ್ತದೆ.

ಒಟ್ಟಾರೆಯಾಗಿ ಕಲಬುರಗಿ ಜಿಲ್ಲೆಯ ಆಧುನಿಕ ವಚನಕಾರರ ವಚನಗಳನ್ನು ಅಧ್ಯಯನ ಮಾಡಿದಾಗ ಇವರು ೧೨ ನೇ ಶತಮಾನದಲ್ಲಿ ಉನ್ನತವಾದ ಶಿಖರಕ್ಕೇರಿದ ವಚನ ಸಾಹಿತ್ಯವನ್ನು ಮತ್ತೊಮ್ಮೆ ಇಂದಿನ ಆಧುನಿಕ ಯುಗದಲ್ಲಿ ಪುನರುಜೀವನಗೊಳಿಸಿದ್ದಾರೆ. ಹೀಗಾಗಿ ಕಲಬುರಗಿ ಜಿಲ್ಲೆಯು ಆಧುನಿಕ ವಚನ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಮೋಘವಾಗಿದೆ. ಒಟ್ಟು ಏಳು ಅಧ್ಯಾಯನಗಳಲ್ಲಿ ಪ್ರಸ್ತುತ ಅಧ್ಯಾಯನವನ್ನು ಪೂರೈಸಲಾಗುತ್ತದೆ.

ಮಾರ್ಗದರ್ಶಕರು	ಸಂಶೋಧನ ವಿದ್ಯಾರ್ಥಿನಿ
ಡಾ. ಎ. ನಾಗರಾಜ	**ಕುಮಾರಿ.ಸುಕನ್ಯಾ ಮಾಣಿಕರಾವ**